ಕ್ರ ಸಂ	ಜಿಲ್ಲೆ	ಸಾವಯವ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)	ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)
22	ದಾವರಾಡ	11	–
23	ಗದಗ್	103	–
24	ಹಾವೇರಿ	16	–
25	ಬಳ್ಳಾರಿ	11	–
26	ಬೀದರ್	87	2
27	ರಾಯಚೂರು	10	–
	ಒಟ್ಟು	1995	35

135 (256) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಟ್ರ್ಯಾಕ್ಟರ್‌ಗಳಿಗೆ ನೀಡುವ ಸಬ್ಸಿಡಿ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಸಬ್ಸಿಡಿ ಪಡೆಯಲು ಜೇಷ್ಠತಾ ಪಟ್ಟಿ ಪರಿಗಣಿಸಲಾಗುವುದೇ ಹಾಗೂ ತಯಾರಿಸಲಾಗಿದೆಯೇ ಹಾಗೂ ತಯಾರಿಸಲಾಗುವುದೇ ,

ಇ) ಸಬ್ಸಿಡಿಯನ್ನು ಜೇಷ್ಠತಾ ಪಟ್ಟಿಯನುಸಾರವಾಗಿ ನೀಡಲಾಗಿದೆಯೇ , ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ಇಲ್ಲ

ಆ) ಹೌದು, ಜೇಷ್ಠತಾ ಪಟ್ಟಿಗಳನ್ನು ತಾಲ್ಲೂಕು ಮಟ್ಟದಲ್ಲಿ ತಯಾರಿಸಲಾಗಿದೆ

ಇ) ಹೌದು

136 (434) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಯು ಹೊಂದಿರುವ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ,

ಆ) ಅವುಗಳಲ್ಲಿ ಎಷ್ಟು ಪ್ರಮಾಣದ ಜಮೀನಿನ ಬಳಕೆ ಆಗಿದೆ ,

ಇ) ಖಾಲಿ ಬಿಟ್ಟಿರುವ ಜಮೀನಿನ ವಿಸ್ತೀರ್ಣ ಎಷ್ಟು ,

ಈ) ತೋಟಗಾರಿಕೆ ಇಲಾಖೆಯವರು ಜಮೀನಿನ ಬಳಕೆಯಿಂದ ಪಡೆಯುತ್ತಿರುವ ವಾರ್ಷಿಕ ಆದಾಯವೆಷ್ಟು ,

ಉ) ಜಮೀನಿನ ಸದ್ಬಳಕೆಗಾಗಿ ಸರಕಾರದ ಯೋಜನೆಗಳೇನು ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಯು ಹೊಂದಿರುವ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಜಮೀನಿನ ಒಟ್ಟು ವಿಸ್ತೀರ್ಣ 314 00 ಎಕರೆಗಳು

ಆ) ಅವುಗಳಲ್ಲಿ ಒಟ್ಟು 208 20 ಎಕರೆಗಳ ಜಮೀನು ಬಳಕೆಆಗಿದೆ

ಇ) ಖಾಲಿ ಬಿಟ್ಟಿರುವ ಜಮೀನಿನ ವಿಸ್ತೀರ್ಣ 105 20 ಎಕರೆಗಳು

ಈ) ಈ ಜಮೀನಿನ ಬಳಕೆಯಿಂದ ಪಡೆಯುತ್ತಿರುವ ವಾರ್ಷಿಕ ಆದಾಯ ರೂ 15 04 ಲಕ್ಷಗಳು (2005–06)

ಉ) ಜಮೀನಿನ ಸದ್ಬಳಕೆಗಾಗಿ ಸರಕಾರದ ಯೋಜನೆಗಳು ಈ ಕೆಳಕಂಡಂತೆ ಇವೆ

ಮದ್ದಡ್ಕ ತೋಟಗಾರಿಕೆ ಕ್ಷೇತ್ರದಲ್ಲಿ ಮಾದರಿ ಸಸ್ಯಾಗಾರ ಸ್ಥಾಪಿಸಲಾಗುತ್ತಿದೆ

ಎಲ್ಲಾ ವಿಧವಾದ ಅಪ್ರಧಾನ ಹಣ್ಣುಗಳ ಗ್ರೌಂಡ್ ನರ್ಸರಿ ಅಭಿವೃದ್ಧಿಪಡಿಸಲಾಗುತ್ತಿದೆ

ಮಳೆ ನೀರಿನ ಸದ್ಬಳಕೆಗಾಗಿ ಹಾಗೂ ಅಂತರ್ಜಲ ಹೆಚ್ಚಿಸುವ ದೃಷ್ಟಿಯಿಂದ ಕೃಷಿ ಹೊಂಡ ನಿರ್ಮಾಣ ಮಾಡಲಾಗುತ್ತಿದೆ

ಅನುತ್ಪಾದಕ ಹಣ್ಣಿನ ಗಿಡಗಳನ್ನು ತೆಗೆದು ಹೊಸದಾಗಿ ಉತ್ತಮ ತಳಿಯ ಗಿಡಗಳನ್ನು ನೆಡಲು ಕ್ರಮ ಕೈಗೊಳ್ಳಲಾಗಿದೆ

ತಾಲ್ಲೂಕಿನಲ್ಲಿರುವ ಎಲ್ಲಾ 3 ಕ್ಷೇತ್ರಗಳಾದ ಚಾರ್ಮುಡಿ ಕ್ಷೇತ್ರ, ಮದ್ದಡ್ಕ ಕ್ಷೇತ್ರ, ಬೆಳ್ತಂಗಡಿ ಕಛೇರಿ ನರ್ಸರಿಗಳಲ್ಲಿ ಎರೆಹುಳು ಗೊಬ್ಬರ ಘಟಕ ನಿರ್ಮಾಣ ಮಾಡಲು ಕ್ರಮ ಏರ್ಪಡಿಸಲಾಗಿದೆ

ಬೆಳ್ತಂಗಡಿ ಕಛೇರಿ ನರ್ಸರಿಯಲ್ಲಿ ಸಣ್ಣ ಸಸ್ಯಾಗಾರ ಸ್ಥಾಪಿಸಲಾಗುತ್ತಿದೆ

ಚಾರ್ಮಾಡಿ ಕ್ಷೇತ್ರದಲ್ಲಿ ಕೋಕೋ ಪ್ರಾಜನಿ (ಸಂತತಿ) ಆರ್ಚಾರ್ಡ್ ನಿರ್ಮಿಸಿ ಮಾದರಿ ಕೋಕೋ ಕ್ಷೇತ್ರವನ್ನಾಗಿಸಲು ಕ್ರಮಕೈಗೊಂಡಿದೆ

ಚಾರ್ಮಾಡಿ ಕ್ಷೇತ್ರದಲ್ಲಿ ದಾಸ್ತಾನು ಕೊರಡಿ ಮತ್ತು ಪಂಪ್‌ಹೌಸ್, ಬೇಲಿ ನಿರ್ಮಾಣ ಮಾಡಲಾಗುತ್ತಿದೆ

ಮದ್ದಡ್ಕ ಕ್ಷೇತ್ರ ಮತ್ತು ಬೆಳ್ತಂಗಡಿ ಕಛೇರಿ ನರ್ಸರಿಯಲ್ಲಿ ಮೂಲಭೂತ ಸೌಕರ್ಯಗಳಾದ ಪಾಲಿಹೌಸ್, ಕೊಳವೆಬಾವಿ, ತಂತಿ ಬೇಲಿ, ಪಾಟಿಂಗ್ ಶೆಡ್ ನಿರ್ಮಾಣ ಮಾಡಲಾಗುತ್ತಿದೆ

138 (436) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಹೊಸ ಕೃಷಿ ನೀತಿಯಿಂದ ರೈತರ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಿಕೊಳ್ಳಲು ಸರಕಾರ ರೂಪಿಸಿ ಜಾರಿಗೊಳಿಸಿದ ಯೋಜನೆಗಳು ಯಾವುವು ,

ಆ) ಹೊಸ ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ಕರ್ನಾಟಕ ಕೃಷಿ ಕ್ಷೇತ್ರವನ್ನು ಗಣನೀಯ ಪ್ರಮಾಣದಲ್ಲಿ ಮುನ್ನಡೆಸಲು ಸರ್ಕಾರದ ಸಮಯ ನಿರ್ಬಂಧಿತ ಕಾರ್ಯಕ್ರಮಗಳೇನು ,

ಇ) ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸೌಲಭ್ಯ ನೀಡುವ ಕುರಿತಾದ ಸರ್ಕಾರದ ನಿಲುವುಗಳೇನು ,

ಈ) ಕೃಷಿ ತಂತ್ರಜ್ಞಾನ ಪಾರ್ಕ್‌ಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಪ್ರಾರಂಭಿಸುವ ಸರ್ಕಾರದ ಯೋಜನೆಗಳೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ರಾಜ್ಯದ ಹೊಸ ಕೃಷಿ ನೀತಿಯಲ್ಲಿ ರೈತರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಇವುಗಳನ್ನು ಮುಂದಿನ ಆರ್ಥಿಕ ವರ್ಷದಿಂದ ಜಾರಿಗೆತರಲು ಉದ್ದೇಶಿಸಲಾಗಿದೆ

ಆ) ಹೊಸ ಕೃಷಿ ಸಂಶೋಧನಾ ಫಲವನ್ನು ಆಗಿಂದ್ದಾಗ್ಗೆ ರೈತಾಪಿ ವರ್ಗಕ್ಕೆ ತಲುಪಿಸಲು ಕೃಷಿ ನೀತಿಯಲ್ಲಿ ಒತ್ತು ನೀಡಲಾಗಿದೆ

ಇ) ರೈತರಿಗೆ ಶೇ 4% ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ ಈಗಾಗಲೇ ಸಾಲ ನೀಡಲಾಗುತ್ತಿದೆ

ಈ) ರಾಜ್ಯ ನೂತನ ಕೃಷಿ ನೀತಿಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಒಂದೊಂದು ಕೃಷಿ ತಂತ್ರಜ್ಞಾನ ಪಾರ್ಕ್‌ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ